MYSORE LEGISLATIVE ASSEMBLY.

THIRD DAY.

Wednesday 13th October 1954

The House met in the Assembly Hall, Old Public Offices, Bangalore, at Twelve of the Clock.

MR. DEPUTY SPEAKER (SRI R. CHENNIGARAMIAH) in the Chair.

QUESTIONS AND ANSWERS

Restoration of Madaga Tank.

Q.—137. Sri D. M. GOVINDARAJU (Nelamangala).—

Will the Government be pleased to state :—

(*a*) when the estimate for the restoration of Madaga tank, Sompur Hobli, Nelamangala Taluk was prepared ;

(*b*) at what stage this question is at present ;

(*c*) since how long the people of the locality are representing before Government for the restoration of this tank ?

A.—Sri Kadidal MANJAPPA (Minister for Revenue and Public Works).—

(*a*) In July 1953.

(*b*) The estimate is under scrutiny.

(*c*) Since 1937.

ಶ್ರೀ ಡಿ. ಎಂ. ಗೋವಿಂದರಾಜು.—ಇದರ ಅಂದಾಜಿನ ಮೊಬಲಗೆಷ್ಟು ?

ಶ್ರೀ ಕಡಿದಾಳ್ ಮಂಜಪ್ಪ.—ಒಂದು ಲಕ್ಷ 80 ಸಾವಿರ ರೂಪಾಯಿಗಳು.

ಶ್ರೀ ಡಿ. ಎಂ. ಗೋವಿಂದರಾಜು.—ಜಾಗ್ರತೆಯಾಗಿ ಈ ಅಂದಾಜನ್ನು ಮಂಜೂರು ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ನಿಖರವಾಗಿ ಈಗ ಹೇಳಲಾರೆ.

ಶ್ರೀ ಎಸ್. ಸಿದ್ದಪ್ಪ.—ಇದರ ಅಚ್ಚುಕಟ್ಟೆಷ್ಟಿದೆ ?

ಶ್ರೀ ಕಡಿದಾಳ್ ಮಂಜಪ್ಪ.—350 ಎಕರೆಯೆಂದು ಕಾಣುತ್ತದೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಬರೀ ಜೀರ್ಣೋದ್ಧಾರಕ್ಕೇ ಇಷ್ಟು ಹಣ ಖರ್ಚಾಗುತ್ತದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಈಚೆಗೆ ತಯಾರು ಮಾಡಿರುವುದರಿಂದ ಹಿಂದೆ ಎಷ್ಟಾಗುತ್ತಿತ್ತೋ ಅದಕ್ಕಿಂತ ಜಾಸ್ತಿಯಾಗಿದೆ. ಈಗ ಮಾಡಿರುವುದು ಸೂಪರ್‌ಟೆಂಡಿಂಗ್ ಇಂಜಿನಿಯರ್‌ರವರ ಪರಿಶೀಲನೆಯಲ್ಲಿದೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಯಾವಾಗ ತಯಾರು ಮಾಡಿರುವುದು ?

ಶ್ರೀ ಕಡಿದಾಳ್ ಮಂಜಪ್ಪ.—ಈ ವರ್ಷ.

ಶ್ರೀ ಎ. ವಿ. ನರಸಿಂಹರೆಡ್ಡಿ.—300 ಚಿಲ್ಲರೆ ಎಕರೆ ಅಚ್ಚುಕಟ್ಟಿಗೆ ಅನುಕೂಲವಾಗುವುದರಿಂದ ಈ ಜೀರ್ಣೋದ್ಧಾರ ಕೆಲಸ ರೆವ್ಯೂನರೇಟಿವ್ ಅಲ್ಲವೆ ? ಆದ್ದರಿಂದ ಇದನ್ನು ಜಾಗ್ರತೆ ಜೀರ್ಣೋದ್ಧಾರ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಬಾಕಿ ಅಂತಗಳನ್ನೂ ಕೂಡ ಗಮನಿಸಬೇಕು. ಎಷ್ಟು ಜಮೀನು ನೀರು ಮುಳುಗಡೆಯಾಗುತ್ತದೆ, ಎಷ್ಟು ಪ್ರದೇಶ ಸಾಗುವಳಿಗೆ ಬರುತ್ತದೆ, ಮುಳುಗಡೆಯಾದ ಪ್ರದೇಶಕ್ಕೆ ಕಾಂಪೆನ್ಸೇಷನ್ ಎಷ್ಟು ಕೊಡಬೇಕಾಗುತ್ತದೆ ಎಂಬುದನ್ನೆಲ್ಲಾ ಗವನಿಸಿದಲ್ಲಿಟ್ಟು ಅನಂತರ ತೀರ್ಮಾನಮಾಡಬೇಕು.

ಶ್ರೀ ಎ. ವಿ. ನರಸಿಂಹರೆಡ್ಡಿ.—ಎಸ್ಟಿಮೇಟ್ ಮಾಡುವಾಗ ಅದರಲ್ಲಿ ಕಾಂಪೆನ್ಸೇಷನ್ ಕೊಡಬೇಕಾಗುವ ಮೊಬಲಗನ್ನು ಸೇರಿಸುವುದಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಸಾಮಾನ್ಯವಾಗಿ ಸೇರಿಸುತ್ತಾರೆ. ಈಗ ಸೇರಿಸಿದೆಯೆ, ಇಲ್ಲವೆ ಎಂಬುದನ್ನು ನಿರ್ದಾರವಾಗಿ ಹೇಳುವುದಕ್ಕಾಗುವುದಿಲ್ಲ.

ಶ್ರೀ ಟಿ. ಎಣ್. ಮೂಡಲಗಿರಿಗೌಡ.—ಇದರಿಂದ ರಿಟರ್ನ್ ಎಷ್ಟು ಬರುತ್ತದೆ ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ಲೆಕ್ಕ ಹಾಕಿಲ್ಲ.

ಶ್ರೀ ಟಿ. ಎಣ್. ಮೂಡಲಗಿರಿಗೌಡ.—ಎಷ್ಟು ಬರಬೇಕೆಂಬ ಅಭಿಪ್ರಾಯವಿದೆ ?

ಶ್ರೀ ಕಡಿದಾಳ್ ಮಂಜಪ್ಪ.—ಸಾಮಾನ್ಯವಾಗಿ ಶೇಕಡ ಮೂರರಷ್ಟು.

ಶ್ರೀ ಟಿ. ಎಣ್. ಮೂಡಲಗಿರಿಗೌಡ.—ಕಾಂಟ್ರಿಬ್ಯೂಷನ್ ಮೇರೆ ಲೆಕ್ಕ ಹಾಕುತ್ತೀರೋ ಅಥವಾ ವಾಟರ್ ರೇಟ್, ಕಂದಾಯ ಎಲ್ಲಾ ಸೇರಿಸಿ ಲೆಕ್ಕ ಹಾಕುತ್ತೀರೋ ?

ಶ್ರೀ ಕಡಿದಾಳ್ ಮಂಜಪ್ಪ.—ವಾಟರ್ ರೇಟ್ ಮತ್ತು ಕಾಂಟ್ರಿಬ್ಯೂಷನ್ ಮೇರೆ.

ಶ್ರೀ ಟಿ. ಎಣ್. ಮೂಡಲಗಿರಿಗೌಡ.—ಶೇಕಡ ಮೂರಕ್ಕಿಂತ ಕಡಮೆ ಬರುವುದನ್ನು ತೆಗೆದು ಕೊಳ್ಳುವುದಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ತೆಗೆದುಕೊಳ್ಳುತ್ತೇವೆ.

ಶ್ರೀ ಎಣ್. ಹುಚ್ಚಮಾಸಿಗೌಡ.—ಯಾವ ಸಂದರ್ಭದಲ್ಲಿ ಶೇಕಡ ಮೂರಕ್ಕಿಂತ ಕಡಮೆ ಬರುವುದನ್ನು ತೆಗೆದುಕೊಳ್ಳುತ್ತೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಆ ಕೆರೆ ಭಟ್ಟು ಬೇರೆ ನೀರಿನ ಆಶ್ರಯವಿಲ್ಲದಿದ್ದಾಗ, ನೀರಿಗೆ ಬಹಳ ತೊಂದರೆಯಾಗಿರುವಾಗ, ರೈತರಿಗೆ ಹೆಚ್ಚು ಸಹಾಯವಾಗುವಾಗ—ಇಂಥ ಸಂದರ್ಭಗಳಲ್ಲಿ ಯೋಚನೆಮಾಡಿ ಶೇಕಡ ಮೂರಕ್ಕಿಂತ ಕಡಮೆ ಬರುವುದನ್ನು ತೆಗೆದು ಕೊಳ್ಳುತ್ತೇವೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ನೀರು ಮುಳುಗಡೆಯಾಗುವ ಜಮೀನಿನವರು ತಮಗೆ ಕಾಂಪೆಸೇಷನ್ ಬೇಕಾಗಿಲ್ಲವೆಂದು ಬರೆದುಕೊಟ್ಟರೆ ಆ ಹಣವನ್ನು ಒಟ್ಟು ಅಂದಾಜಿನಲ್ಲಿ ಕಡಮೆಮಾಡಿ ತೀರ್ಮಾನ ಮಾಡಲು ಸಾಧ್ಯವೆ ?

ಶ್ರೀ ಕಡಿದಾಳ್ ಮಂಜಪ್ಪ.—ಅದು ಆಯಾ ಸಂದರ್ಭದಮೇಲೆ ಅವಲಂಬಿಸಿರುತ್ತದೆ.

ಶ್ರೀ ಜಿ. ನಾರಾಯಣಗೌಡ.—ಈಗ ಹಾಕತಕ್ಕ ವಾಟರ್ ರೇಟಿನ ಪರಮಾವಧಿ ಮೊಬಲಗೆಷ್ಟು ?

ಶ್ರೀ ಕಡಿದಾಳ್ ಮಂಜಪ್ಪ.—ಆ ರೀತಿ ನಿಗದಿ ಮಾಡಿಲ್ಲ.

ಶ್ರೀ ಜಿ. ನಾರಾಯಣಗೌಡ.—ಹಾಗಾದರೆ ಯಾವ ಆಧಾರದ ಮೇಲೆ ನಿಗದಿ ಮಾಡುತ್ತೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಸರ್ಕಾರಕ್ಕೆ ನಷ್ಟವಾಗದಿರುವ ರೀತಿಯಲ್ಲಿ ನಿಗದಿ ಮಾಡುತ್ತೇವೆ.

ಶ್ರೀ ಜಿ. ನಾರಾಯಣಗೌಡ.—ಈಗ ಶೇಕಡ ಮೂರರಷ್ಟು ಬರಬೇಕೆಂದು ಹೇಳಿದೆ. ಅದರ ಮೇಲೆ ವಾಟರ್ ರೇಟ್ ನಿಗದಿ ಮಾಡುತ್ತೀರೋ ಅಥವಾ ಬೇರೆ ಯಾವ ಆಧಾರದ ಮೇಲಾದರೂ ನಿಗದಿ ಮಾಡುತ್ತೀರೋ ?

ಶ್ರೀ ಕಡಿದಾಳ್ ಮಂಜಪ್ಪ.—ತಕ್ಕಷ್ಟು ರಿಟರ್ನ್ ಬರುವ ಆಧಾರದ ಮೇಲೆ ನಿಗದಿ ಮಾಡುತ್ತಾರೆ.

ಶ್ರೀ ಜಿ. ನಾರಾಯಣಗೌಡ. ಹಾಗೆ ನಿಗದಿ ಮಾಡುವಾಗ ವಾಟರ್ ರೇಟ್, ಏಕರೇಜ್ ಮೇಲಿರುವ ಕಂದಾಯ ಇದನ್ನೆಲ್ಲಾ ಸೇರಿಸುತ್ತೀರಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಸೇರಿಸುವುದಕ್ಕಾಗುವುದಿಲ್ಲ. ವಾಟರ್ ರೇಟ್ ಪ್ರತ್ಯೇಕ ಮಾಡಬೇಕು.

ಶ್ರೀ ಜಿ. ನಾರಾಯಣಗೌಡ.—ವಾಟರ್ ರೇಟ್ ಒಂದನ್ನೇ ವಸೂಲು ಮಾಡುತ್ತೀರೋ ಅಥವಾ ಖುಷ್ಕಿ ದರಪಿಡಿಯೆಲ್ಲಾ ಅದನ್ನೂ ಸೇರಿಸಿ ವಾಟರ್ ರೇಟಿನೊಂದಿಗೆ ವಸೂಲು ಮಾಡುತ್ತೀರೋ ?

ಶ್ರೀ ಕಡಿದಾಳ್ ಮಂಜಪ್ಪ.—ಸಾಮಾನ್ಯವಾಗಿ ಹೊಸದಾಗಿ ಹಾಕುವಾಗ ವಾಟರ್ ರೇಟ್ ಬಿಟ್ಟು ಖುಷ್ಕಿ ಕಂದಾಯವನ್ನು ಪ್ರತ್ಯೇಕವಾಗಿ ವಸೂಲು ಮಾಡಲಾಗುವುದು.

ಶ್ರೀ ಜಿ. ನಾರಾಯಣಗೌಡ.—ಹಾಗೆ ಮಾಡುವಾಗ ದರಗಳು ಬಹಳ ಹೆಚ್ಚಾಗುವುದಿಲ್ಲವಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಸ್ಥಿತಿಗತಿ ನೋಡಿ ಹೆಚ್ಚಿದ ಹಾಗೆ ನೋಡಿಕೊಳ್ಳುತ್ತಾರೆ.

ಶ್ರೀ ಜಿ. ನಾರಾಯಣಗೌಡ.—ಸಾಮಾನ್ಯವಾಗಿ ಕೋಲಾರ ಜಿಲ್ಲೆಯಲ್ಲಿ ಎಕರೆಗೆ 6½ ರೂಪಾಯಿಗಳ ದರಪಿರುವಾಗ 9½ ರೂಪಾಯಿಗಳಂತೆ ತಾವು ಅಂದಾಜು ಮಾಡಿರಲಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಜ್ಞಾಪಕವಿಲ್ಲ.

ಶ್ರೀ ಜಿ. ನಾರಾಯಣಗೌಡ.—ಈಗ ಹೊಸದಾಗಿ ಅಂದಾಜು ಮಾಡಿರುವ ಕೆರೆಗಳಿಗೆ 15 ರೂಪಾಯಿಗಳ ವಾಟರ್ ರೇಟ್ ಕೇಳಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ಸಂದರ್ಭಗಳಲ್ಲಿ ಕೆರೆ ಜೀರ್ಣೋದ್ಧಾರ ಮಾಡುವುದರಿಂದ ರೈತರಿಗೆ ಹೆಚ್ಚು ಪ್ರತಿಫಲವುಂಟಾಗುವುದಿಲ್ಲ. ಸರ್ಕಾರಕ್ಕೂ ಲಾಭದಾಯಕವಾಗಿರುವುದಿಲ್ಲ. ಅಂಥ ಸಂದರ್ಭಗಳಲ್ಲಿ ರೈತರು 'ಜೀರ್ಣೋದ್ಧಾರ ಮಾಡಬೇಕು, ಅಷ್ಟು ವಾಟರ್ ರೇಟ್, ಕಾಂಟ್ರಿಬ್ಯೂಷನ್ ಕೊಡುತ್ತೇವೆ' ಎಂದು ಕೇಳುತ್ತಾರೆ.

ಶ್ರೀ ಜಿ. ನಾರಾಯಣಗೌಡ.—ರೈತರಿಗೆ ಜೀವನೋಪಾಯಕ್ಕೆ ಮಾರ್ಗವಾಗುವಾಗ ಸರ್ಕಾರ ಅದನ್ನು ಒಂದು ಒಳ್ಳೆಯ ದೃಷ್ಟಿಯಿಂದ ನೋಡಬೇಕಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಸರ್ಕಾರದ ಹಣ ಕಾಸಿನ ಪರಿಸ್ಥಿತಿಯನ್ನು ಕೂಡ ಗಮನಿಸಬೇಕು.

ಶ್ರೀ ಜಿ. ನಾರಾಯಣಗೌಡ.—ವಾಟರ್ ರೇಟ್ 15 ರೂಪಾಯಿಗಳು ಹಾಕುವುದು ಬಹಳ ಹೆಚ್ಚೆಂಬುದನ್ನು ಪರಿಶೀಲಿಸುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ನಿದರ್ಶನ ಹೇಳಿದರೆ ವಿಚಾರ ಮಾಡುತ್ತೇವೆ.

Low level causeway near Muthusandra Village.

Q.—148. **H. T. PUTTAPPA** (Hosakote-Anekal—Scheduled Castes).—

Will the Government be pleased to state :—

whether it has come to their notice that the work of constructing a low level causeway near Muthusandra Village, Anugondahalli Hobli, has not been taken up, though the estimate for the same has been prepared ?

A.—**Sri Kadidal MANJAPPA** (Minister for Revenue and Public Works).—

Yes ; Government are aware that the work has not been taken up yet. A detailed estimate is under preparation.

ಶ್ರೀ ಎಚ್. ಟಿ. ಪುಟ್ಟಪ್ಪ.—ಈ ಕೆಲಸವನ್ನು ಷುರು ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಎಸ್ಟಿಮೇಟ್ ತಯಾರಾಗುತ್ತಿದೆ, ತಯಾರಾದನಂತರ ತೀರ್ಮಾನ ಮಾಡುತ್ತೇವೆ.

ಶ್ರೀ ಎಚ್. ಟಿ. ಪುಟ್ಟಪ್ಪ.—ಎಷ್ಟು ದಿವಸಗಳಿಂದ ಎಸ್ಟಿಮೇಟ್ ತಯಾರಾಗುತ್ತಿದೆ ?

ಶ್ರೀ ಕಡಿದಾಳ್ ಮಂಜಪ್ಪ.—ಈ ವರ್ಷ ತಯಾರು ಮಾಡುತ್ತಿದ್ದಾರೆ.

ಶ್ರೀ ಎಚ್. ಟಿ. ಪುಟ್ಟಪ್ಪ.—ಎಸ್ಟಿಮೇಟ್ ತಯಾರಾಗುವುದಕ್ಕೆ ಇನ್ನೂ ಎಷ್ಟು ದಿವಸ ಬೇಕು ?

ಶ್ರೀ ಕಡಿದಾಳ್ ಮಂಜಪ್ಪ.—ಹೇಳುವುದಕ್ಕಾಗುವುದಿಲ್ಲ. ಅವಶ್ಯಕವಾಗಿ ಎಷ್ಟು ಕಾಲ ಬೇಕೋ ಅಷ್ಟು ಬೇಕು.

ಶ್ರೀ ಆರ್. ಮುನಿಸ್ವಾಮಯ್ಯ.—ಈ ಕೆರೆಗೆ ಎಷ್ಟು ನಲ ಅಂದಾಜುಮಾಡಿದೆ ?

ಶ್ರೀ ಕಡಿದಾಳ್ ಮಂಜಪ್ಪ.—ಕೆರೆಯನ್ನಲ್ಲ, 'ಕಾಸ್ ವೆ' ಯನ್ನು ಈಗ ಮಾಡುತ್ತಿದೆ, ಹಿಂದಿನ ವಿಚಾರ ಗೊತ್ತಿಲ್ಲ.

ಶ್ರೀ ಆರ್. ಮುನಿಸ್ವಾಮಯ್ಯ.—ಹೀಗೆ ಕಾಲ ಹರಣ ಮಾಡುವುದರಿಂದ ಸರ್ಕಾರಕ್ಕೆ ನಷ್ಟವಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಕಾಲಹರಣ ಮಾಡುತ್ತಿದ್ದಾರೆಂದು ಒಪ್ಪಿಕೊಂಡಿಲ್ಲ.